ಇಲಾಖಾ ಪುನರ್ ರಚನೆ

211 (888) ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) :– ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವಾ ಇಲಾಖೆಯನ್ನು ಸಮಗ್ರವಾಗಿ ಪುನರಚಿಸುವ ಉದ್ದೇಶ ಸರ್ಕಾರದ ಮುಂದಿದ್ದು, ಪ್ರಥಮವಾಗಿ ಇಲಾಖೆಗೆ ಭಾರತೀಯ ಆಡಳಿತ ಅಧಿಕಾರಿ ವರ್ಗಕ್ಕೆ ಸೇರಿದ ಆಯುಕ್ತರನ್ನು ನೇಮಕ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

ಆ) ಆಯುಕ್ತರ ನೇಮಕವಾಗಿ 6 ವರ್ಷ ಕಳೆದರೂ ಕೂಡ ಇಲ್ಲಿಯವರೆಗೆ ಸಮಗ್ರವಾದ ಪುನರ್ ರಚನೆ ಮಾಡದಿರಲು ಕಾರಣವೇನು ;

ಇ) 2011–12ನೇ ಸಾಲಿನ ಆಯವ್ಯಯದಲ್ಲಿ, ಪಶು ಸಂಗೋಪನಾ ಇಲಾಖೆಯ ಸಮಗ್ರ ಪುನರ್ ರಚನೆಗಾಗಿ ಮೀಸಲಿಡಲಾದ ಹಣವೆಷ್ಟು ;

ಈ) ಇದನ್ನು ಇಲ್ಲಿಯವರೆಗೆ ಬಳಸಿಕೊಳ್ಳದಿರಲು ಕಾರಣವೇನು ;

ಉ) ಪಶು ಸಂಗೋಪನೆ ಇಲಾಖೆಯ ಪೂರ್ಣ ಪ್ರಮಾಣದ ಪುನರ್ ರಚನೆಯನ್ನು ಯಾವಾಗ ಕೈಗೊಳ್ಳುವುದು ?

ಶ್ರೀ ರೇವೂನಾಯಕ್ ಬೆಳಮಗಿ (ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು):–

ಅ) ಭಾರತೀಯ ಆಡಳಿತ ಸೇವೆಯ ಅಧಿಕಾರಿಯು ಆಯುಕ್ತರಾಗಿ ಈಗಾಗಲೇ ನೇಮಕಗೊಂಡಿರುತ್ತಾರೆ.

ಆ) ಇಲಾಖಾ ಪುನರ್ ರಚನೆಗೆ ಸರ್ಕಾರವು ಉನ್ನತಾಧಿಕಾರಿಗಳ ಸಮಿತಿಯನ್ನು ದಿನಾಂಕ : 28–05–2011 ರಂದು ರಚಿಸಿದ್ದು, ಸಮಗ್ರ ಪರಿಷ್ಕೃತ ವರದಿಯನ್ನು ದಿನಾಂಕ: 21–09–2011 ರಂದು ಸಲ್ಲಿಸಲಾಗಿದೆ. ಉನ್ನತಾಧಿಕಾರಿಗಳ ಸಮಿತಿಯು

ಸೆಪ್ಟೆಂಬರ್–2011 ರಲ್ಲಿ ಶಿಫಾರಸ್ಸು ಮಾಡಿದ್ದು, ಪರಿಶೀಲನೆಯಲ್ಲಿದೆ.

ಇ) ಅನುದಾನವನ್ನು ನಿಗಧಿಪಡಿಸಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಪರಿಶೀಲನೆಯಲ್ಲಿದೆ.

ಪಶುಸಂಗೋಪನಾ ಕೇಂದ್ರ

286 (715) ಶ್ರೀ ಸಂಗಮೇಶ್ವರ ಬಿ.ಕೆ. (ಭದ್ರಾವತಿ) :– ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಭದ್ರಾವತಿ ತಾಲ್ಲೂಕಿನಲ್ಲಿ ಹೊಸದಾಗಿ ಪಶು ಸಂಗೋಪನಾ ಕೇಂದ್ರವನ್ನು ನಿರ್ಮಿಸುವ ಮತ್ತು ಪಶು ಸಂಗೋಪನಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

ಆ) ಭದ್ರಾವತಿ ತಾಲ್ಲೂಕಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮೀನುಗಾರರು ವಾಸಿಸುತಿದ್ದು, ಇವರುಗಳು ಮೂಲ ಸೌಲಭ್ಯದಿಂದ ವಂಚಿತರಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ತುರ್ತಾಗಿ ಇವರುಗಳಿಗೆ ಮನೆ ಮತ್ತು ಇತರೆ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

ಶ್ರೀ ರೇವೂನಾಯಕ್ ಬೆಳಮಗಿ (ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು):–

ಅ) ಭದ್ರಾವತಿ ತಾಲ್ಲೂಕಿನಲ್ಲಿ ಹೊಸದಾಗಿ ಯಾವುದೇ ಪಶುವೈದ್ಯಕೀಯ ಚಿಕಿತ್ಸಾಲಯ/ ಆಸ್ಪತ್ರೆ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

2007ನೇ ಜಾನುವಾರು ಗಣತಿಯಂತೆ ಭದ್ರಾವತಿ ತಾಲ್ಲೂಕಿನಲ್ಲಿ ಒಟ್ಟು 96, 113 ಜಾನುವಾರು ಘಟಕಗಳಿವೆ. ಕೇಂದ್ರ ಸರ್ಕಾರದ ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ